ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಶ್ರೀ ನರಸಿಂಹಮೂರ್ತಿ ಮತ್ತು ಇನ್ನೊಬ್ಬರು ವಿರುದ್ಧ-ಶ್ರೀ ಸುರೇಶ್ ಚಂದ್ರ ಗುಪ್ತ ಮೃತರಾಗಿರುವುದರಿಂದ ವಾರಸುದಾರರ ಮೂಲಕ ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 23257/2019 (ಜಿ.ಎಮ್-ಸಿಪಿಸಿ), ದಿನಾಂಕ 21 ನೇ ಆಗಸ್ಟ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:

ಅಮಲ್ದಾರಿ ಅರ್ಜಿಸಂಖ್ಯೆ: 2/2017 ರಲ್ಲಿ ಸಾಲ ತೀರಿಸಬೇಕೆಂದು ತೀರ್ಪು ಪಡೆದ 2 ನೇ ಮತ್ತು 3 ನೇ ಸಾಲಗಾರರಾಗಿ ಅರ್ಜಿದಾರರು,ದಿನಾಂಕ: 22.02.2019 ರ ಆದೇಶವನ್ನು ಪ್ರಶ್ನಿಸಲು ಈ ರಿಟ್ ನ್ಯಾಯಾಲಯದ ಬಾಗಿಲು ತಟ್ಟಿದ್ದಾರೆ.ಸದರಿ ಆದೇಶ ಪ್ರತಿಯು ಅನುಬಂಧ-ಎ'ಯಲ್ಲಿದೆ.ಈ ಆದೇಶದ ಮೂಲಕ, ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಇವರು, ಅಮಲ್ದಾರಿ ಅರ್ಜಿಯ ಸಮರ್ಥನೀಯತೆಗೆ ಸಂಬಂಧಿಸಿದ ಅವರ ಆಕ್ಷೇಪಣೆಯನ್ನು ನಿರಾಕರಿಸಿದ್ದಾರೆ.ಪ್ರತಿವಾದಿಸುತ್ತಿರುವ ಪ್ರತಿವಾದಿ ಡಿಕ್ಕಿಧಾರಕರು, ರಿಟ್ ಅರ್ಜಿಯನ್ನು ವಿರೋಧಿಸಿ ಅವರ ನ್ಯಾಯವಾದಿಗಳ ಮೂಲಕ ಹಾಜರಾಗಿದ್ದಾರೆ.

2. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

(ಎ) ಅರ್ಜಿದಾರರ ತಾಯಿಗೆ, ಆಕೆಯು ಅನುಸೂಚಿತ ಜಾತಿಗೆ/ಅನುಸೂಚಿತ ಪಂಗಡಕ್ಕೆ ಸೇರಿದ್ದಾಳೆಂಬ ಕಾರಣದ ಮೇಲೆಸಂಖ್ಯೆ: ಎಲ್ಎನ್ಡಿ/2168/1972-73ನ್ನು ಹೊಂದಿರುವ ಮಂಜೂರಾತಿ ಪ್ರಮಾಣಪತ್ರದ ಮೂಲಕ ಸರ್ಕಾರವು ದಾವೆಯ ವಸ್ತು ವಿಷಯವಾದ ಜಮೀನನ್ನು ಮಂಜೂರು ಮಾಡಿದೆ; ಆಕೆಯ ಮರಣಾನಂತರ ಆಕೆಯ ಮಕ್ಕಳಾದ ಅರ್ಜಿದಾರರು, ದಾವೆಯ ವಸ್ತು ವಿಷಯವಾದ ಜಮೀನನ್ನು ಒಳಗೊಂಡಂತೆ O ಆಕೆಯ ಸಂಪದಕ್ಕೆ (ಎಸ್ಟೇಟ್) ಉತ್ತರಾಧಿಕಾರಿಯಾಗಿದ್ದಾರೆ;

(ಬಿ) ದಿನಾಂಕ: 10.06.2005 ರಂದು ಒಪ್ಪಂದ ಮಾಡಿಕೊಂಡಿರುವ, ಪ್ರತಿವಾದಿಸುತ್ತಿರುವ ಪ್ರತಿವಾದಿಯ ಹೆಸರಿಗೆ ಪರಭಾರೆಯಾಗಿ ನಾಲ್ಕು ತಿಂಗಳುಗಳ ಅವಧಿಯನ್ನು ಗೊತ್ತುಪಡಿಸಿರುವ ಅಧಿಕಾರ ವ್ಯಾಪ್ತಿಯುಳ್ಳ ತಹಸೀಲ್ದಾರರುದಿನಾಂಕ: 01.02.2007 ರ ಆದೇಶದ ಮೂಲಕ ದಾವೆಯ ವಸು 0 ವಿಷಯವಾದ ಜಮೀನನ್ನು ಪರಭಾರೆ ಮಾಡಲು ಅರ್ಜಿದಾರರು ಅನುಮತಿ ಪಡೆದಿದ್ದಾರೆ.

(ಸಿ) ಖರೀದಿದಾರ ನಿರ್ದಿಷ್ಟವಾಗಿರುವ ಎಂದರೆ ಇದರಲ್ಲಿ ಪ್ರತಿವಾದಿಸುತ್ತಿರುವ ಪ್ರತಿವಾದಿಗೆ ಮಾತ್ರ ಮಾರಬಹುದಾಗಿರುವ ಸ್ವತ್ತನ್ನು ಮೇಲೆ ಹೇಳಿದ ಅನುಮತಿಯನ್ನು ದುರುಪಯೋಗಪಡಿಸಿಕೊಂಡುದಿನಾಂಕ: 19.04.2007 ರ ನೋಂದಾಯಿತ ಮಾರಾಟ ಪತ್ರದ ಮೂಲಕ ಇದರಲ್ಲಿನ 2 ನೇ ಪ್ರತಿವಾದಿಗೆ ಮುಚ್ಚುಮರೆಯಿಂದ ಅರ್ಜಿದಾರರು ಮಾರಾಟ ಮಾಡಿದ್ದಾರೆ; ಆದುದರಿಂದ, ಪ್ರತಿವಾದಿಸುತ್ತಿರುವ ಪ್ರತಿವಾದಿಗಳು, ಒ.ಎಸ್.ಸಂಖ್ಯೆ: 204/2007 ರಲ್ಲಿ ನಿರ್ದಿಷ್ಟ ಕಾರ್ಯಪಾಲನೆಗಾಗಿ ದಾವೆಯನ್ನು ಹೂಡಿದ್ದಾರೆ.

(ಡಿ) ರಿಟ್ ಹೇಳಿಕೆಯನ್ನು ಸಲ್ಲಿಸಿ ಅರ್ಜಿದಾರರು ದಾವೆಯನ್ನು ವಿರೋಧಿಸಿದ್ದಾರೆ.ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಇವರು, ವಾದಿಯ ಎಂದರೆ ಇದರಲ್ಲಿನ ಪ್ರತಿವಾದಿಸುತ್ತಿರುವ ಪ್ರತಿವಾದಿಯ ಹೆಸರಿಗೆ ಮಾರಾಟ ಪತ್ರವನ್ನು ಬರೆಯಲು ಮತ್ತು ನೋಂದಾಯಿಸಲು ಅರ್ಜಿದಾರರಿಗೆ ಮತ್ತು ಇವರಲ್ಲಿನ 2 ನೇ ಪ್ರತಿವಾದಿಗಳಿಗೆ ನಿರ್ದೇಶಿಸಿ,ದಿನಾಂಕ: 28.06.2016 ರಂದು ದಾವೆಯನ್ನು ಡಿಕ್ಕಿಗೊಳಿಸಿದ್ದಾರೆ; ಇದು 73 ಪುಟಗಳ ದೊಡ್ಡ ತೀರ್ಪಾಗಿದೆ; ವಾದಿಯ ಪರವಾಗಿ 50 ದಸ್ತಾವೇಜುಗಳನ್ನು ಗುರುತಿಸಲಾಗಿದೆ ಮತ್ತು 10 ದಸ್ತಾವೇಜುಗಳನ್ನು ಅರ್ಜಿದಾರರ ಹಾಗೂ 0 ಇದರಲ್ಲಿನ 2 ನೇ ಪ್ರತಿವಾದಿಗಳ ಕಡೆಯಿಂದ ಗುರುತಿಸಲಾಗಿದೆ.

(ಇ) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978 ರಲ್ಲಿ ಅಧಿನಿಯಮಿತಗೊಳಿಸಿದ ನಿಷೇಧದ ಹಿನ್ನೆಲೆಯಲ್ಲಿ ದಾವೆ ವಸ್ತು ವಿಷಯದ ಪರಭಾರೆ ಸಂಬಂಧಿ ವಿವಾದವನ್ನು ಮಾನ್ಯ ವಿಚಾರಣಾ ನ್ಯಾಯಾಧೀಶರು ವಿಶೇಷವಾಗಿ

ಪರಿಗಣಿಸಿದ್ದಾರೆ ಮತ್ತು ಪರಭಾರೆಗೆ ನೀಡಿದ ಅನುಮತಿಯ ಹಿನ್ನೆಲೆಯಲ್ಲಿ ಡಿಕ್ರಿಯನ್ನು ನೀಡುವುದಕ್ಕೆ ಅದು ನಿಷೇಧವಾಗುವುದಿಲ್ಲವೆಂದು ತೀರ್ಪು ನೀಡಿದ್ದಾರೆ.ಆರ್.ಎ.ಸಂಖ್ಯೆ: 69/2016 ರಲ್ಲಿರುವ ಅರ್ಜಿದಾರರ ಅಪೀಲನ್ನು ಸಹ 28 ಪುಟಗಳಲ್ಲಿರುವ ಪರಿಗಣಿತ ಆದೇಶದ ಮೂಲಕದಿನಾಂಕ: 16.11.2017 ರಂದು ತಳ್ಳಿಹಾಕಲಾಗಿದೆ;

(ಎಫ್) ವಿಚಾರಣಾ ನ್ಯಾಯಾಲಯದ ಡಿಕ್ರಿ ಮತ್ತು ಅವರ ವಿರುದ್ಧದ ಅಪೀಲನ್ನು ವಜಾಗೊಳಿಸಿದ ಹೊರತಾಗಿಯೂ, ಅರ್ಜಿದಾರರು ಮತ್ತು 2 ನೇ ಪ್ರತಿವಾದಿಗಳು ಅದನ್ನು ಅನುಪಾಲಿಸಿಲ್ಲ ಹಾಗೂ ಅದರ ಜಾರಿಯನ್ನು ವಿಧಿಸಲು ಕೋರಿ 1 ನೇ ಪ್ರತಿವಾದಿಗಳು ಇ.ಪಿ.ಸಂಖ್ಯೆ: 2/2017 ನ್ನು ಸಲ್ಲಿಸಿದ್ದಾರೆ.ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಡಿಕ್ರಿ ಹಾಗೂ ಅಪೀಲು ನ್ಯಾಯಾಲಯವು ಅದನ್ನು ಸ್ಥಿರೀಕರಿಸಿರುವುದು ಅಕೃತವಾಗಿದೆಯಾದ್ದರಿಂದ, ಜಾರಿಯು ಅಕ್ಷಮವಾಗಿದೆ ಎಂದು ವಾದಿಸಿ, ಅರ್ಜಿದಾರರು ಜಾರಿಯ ವಿರುದ್ಧ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ.ಸದರಿ ಆಕ್ಷೇಪಣೆಗಳನ್ನು ಪ್ರಶ್ನಿತ ಆದೇಶದ ಮೂಲಕ ತಳ್ಳಿಹಾಕಲಾಗಿರುವುದರಿಂದ, ಈ ರಿಟ್ ಅರ್ಜಿಯನ್ನು ಮಂಡಿಸಲಾಗಿದೆ.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ವಿಚಾರಣಾ ನ್ಯಾಯಾಲಯಗಳ ತೀರ್ಪು ಮತ್ತು ಡಿಗ್ರಿಗಳು ಅಕೃತವಾಗಿವೆಯಾದ್ದರಿಂದ, ಅಧಿನಿಯಮದ ಉಪಬಂಧಗಳು ಪರಭಾರೆಯನ್ನು ನಿಷೇಧಿಸುತ್ತವೆ; ಪರಭಾರೆ ಮಾಡಲು ನೀಡಿದ ಅನುಮತಿಯು ನಾಲ್ಕು ತಿಂಗಳುಗಳ ಅವಧಿಗಾಗಿ ಮಾತ್ರ ಅಸ್ತಿತ್ವದಲ್ಲಿತ್ತು ಹಾಗೂ ಅದರಿಂದಾಗಿ, ಡಿಕ್ರಿಯನ್ನು ಸದರಿ ಅವಧಿ ಕೊನೆಗೊಂಡ ನಂತರ ಮಂಜೂರು ಮಾಡಬಾರದಾಗಿತ್ತು; ಜಾರಿ ವ್ಯವಹರಣೆಗಳಿಗೆ ಸಲ್ಲಿಸಿದ್ದ ಆಕ್ಷೇಪಣೆಯನ್ನು ತಳ್ಳಿಹಾಕಿದ ಪ್ರಶ್ನಿತ ಆದೇಶವು ಈ ನ್ಯಾಯಾಲಯದ ವಿಶೇಷ ಅನುಗ್ರಹವನ್ನು ಖಾತರಿಪಡಿಸಿ ಎದ್ದು ಕಾಣುವಂತೆ ತಪ್ಪಾದುದಾಗಿದೆ ಎಂದು ತೀವ್ರವಾಗಿ ವಾದಿಸಿದ್ದಾರೆ.ಪ್ರತಿವಾದಿಸುತ್ತಿರುವ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ಆದೇಶವನ್ನು ಸಮರ್ಥಿಸಿ ನಿವೇದನೆಗಳನ್ನು ಸಲ್ಲಿಸಿದ್ದಾರೆ.

4. ಪಕ್ಷಕಾರರ ಪರ ನ್ಯಾಯವಾದಿಗಳ ವಾದಗಳನ್ನು ಆಲಿಸಿ, ಅರ್ಜಿ ಪತ್ರಗಳನ್ನು ಅವಲೋಕಿಸಿ, ಈ ನ್ಯಾಯಾಲಯವು ಈ ಮುಂದಿನ ಕಾರಣಗಳಿಗಾಗಿ ವಿಷಯದ ಸಂಬಂಧದಲ್ಲಿ ವಿಶೇಷ ಅನುಮತಿಯನ್ನು ನೀಡಲು ನಿರಾಕರಿಸಿದೆ:

(i) ಮಾನ್ಯ ವಿಚಾರಣಾ ನ್ಯಾಯಾಧೀಶರು ಅಂತಿಮವಾಗಿ ಆಲಿಸಿ, ನಿರ್ಧರಿಸಿದಂತೆ ಮ ಂ ಜೂರಾದ ಜಮೀನಿನ ಪರಭಾರೆಗೆ ಸಂಬಂಧಿಸಿದ ವಿಷಯವೇ ಡಿಕ್ರಿ ಮಾಡಬೇಕಾಗಿ ಬಂದ ದಾವೆಯಾಗಿದೆ.ಅಪೀಲಿನಲ್ಲಿ ಪ್ರಶ್ನಿಸಿದ ಡಿಕ್ರಿಯು, ಅಪೀಲನ್ನು ವಜಾಗೊಳಿಸುವ ಮೂಲಕ ಸ್ಥಿರೀಕರಣಗೊಂಡಿದೆ; ಹಾಗಾಗಿ, ಡಿಕ್ರಿಯು ಅಂತಿಮತೆಯನ್ನು ತಲುಪಿದ್ದು, ಹೆಚ್ಚಿನ ಪ್ರಶ್ನೆಗಳೇನೂ ಉಳಿದಿಲ್ಲ;

(ii) ಸಕ್ಷಮ ನ್ಯಾಯಾಲಯವು ನಿರ್ದಿಷ್ಟ ವಿಷಯವನ್ನು ಆಲಿಸಿ, ನಿರ್ಧರಿಸಿರುವಲ್ಲಿ, ಅದನ್ನು ಜಾರಿ ವ್ಯವಹರಣೆಗಳಲ್ಲಿ ಮರು ಚರ್ಚಿಸಲಾಗುವುದಿಲ್ಲ; ಅಂಥ ಮರು ಚರ್ಚೆಯನ್ನು ಪೂರ್ವ ನ್ಯಾಯ ನಿರ್ಣಯದಿಂದ ನಿರ್ಬಂಧಿಸಲಾಗಿದೆ ಮಾತ್ರವಲ್ಲ ಅದು ನ್ಯಾಯಾಲಯ ಪ್ರಕ್ರಿಯೆಯ ದುರುಪಯೋಗವೂ ಆಗುತ್ತದೆ;

(iii) ಎಲ್ಲಾ ವಿಷಯಗಳನ್ನು ಪರಿಗಣಿಸಿದ ತರುವಾಯ ಡಿಕ್ರಿಯನ್ನು ಹೊರಡಿಸಿರುವಲ್ಲಿ, ಅದೇ ವಿಷಯವನ್ನು ಮರುಪರಿಗಣಿಸಲು ಜಾರಿ ನ್ಯಾಯಾಲಯವನ್ನು ಕೇಳಲಾಗುವುದಿಲ್ಲ; ಹಾಗೆ ಮಾಡುವುದು ಕಾನೂನಾತ್ಮಕವಾಗಿ ಅನುಮತೀಯವಲ್ಲದಿರುವ ಡಿಕ್ರಿಯನ್ನು ಹಿಂದಕ್ಕೆ ಒಯ್ಯುವುದಕ್ಕೆ ಸಮವಾಗುತ್ತದೆ;

(iv) ಒಪ್ಪಿಕೊಂಡಂತೆ, ಅರ್ಜಿದಾರರುದಿನಾಂಕ: 01.02.2007 ರಂದು ಜಮೀನನ್ನು ಪರಭಾರೆ ಮಾಡಲು ಅನುಮತಿ ಪಡೆದಿದ್ದರು; ಪರಭಾರೆ ಮಾಡಲು ನಾಲ್ಕು ತಿಂಗಳುಗಳ ಅವಧಿಯನ್ನು ನೀಡಲಾಗಿತ್ತು; ಅದು ದಿನಾ ಂ ಕ:01.06.2007 ರ ಂ ದು ಕೊನೆಗೊಂಡಿತ್ತು; ಮಾರಾಟ ಪತ್ರವನ್ನು ಬರೆದುಕೊಡಲುದಿನಾಂಕ: 27.04.2007 ರಂದು ಕಾನೂನು ರೀತ್ಯಾ ನೋಟೀಸನ್ನು ನೀಡಿದ್ದ ಪ್ರತಿವಾದಿಸುತ್ತಿರುವ ಪ್ರತಿವಾದಿಯ ಪ್ರಯೋಜನಕ್ಕಾಗಿ ಅನುಮತಿಯನ್ನು ಪಡೆದುಕೊಂಡಿದ್ದಾಗ್ಯೂ, ಅರ್ಜಿದಾರರು 2 ನೇ ಪ್ರತಿವಾದಿ ಹೆಸರಿಗೆ ಈ ಅವಧಿಯಲ್ಲಿ ಸ್ವತ್ತನ್ನು ಪರಭಾರೆ ಮಾಡಿದ್ದರು, ಇದು ಮತ್ತೇನೂ ಅಲ್ಲದೆ ಕಾನೂನಿಗೆ, ನ್ಯಾಯಾಲಯಕ್ಕೆ ಮತ್ತು ಪ್ರತಿವಾದಿಗಳಿಗೆ ಮಾಡಿದ ಸ್ಪಷ್ಟ ಮೋಸವಾಗಿದೆ; ಅರ್ಜಿದಾರರ ಮೊಕದ್ದಮೆಯು, ಮೋಸದಿಂದ ಯಾವ

ವ್ಯವಹಾರದ ಹಕ್ಕೊ ಉದ್ಭವಿಸದು ಎಂದರೆ ಕ್ರಿಯೆ ಅಥವಾ ಪ್ರತಿರಕ್ಷೆಯ ಹಕ್ಕು ಮೋಸದಿಂದ ಉದ್ಭವಿಸುವುದಿಲ್ಲ.

(v) ಸ್ವತ್ತನ್ನು ಪರಭಾರೆ ಮಾಡುವ ಅನುಮತಿ ಕೊನೆಗೊಂಡಿದ್ದರಿಂದ, ವಿಚಾರಣಾ ನ್ಯಾಯಾಲಯವು ಡಿಕ್ರಿಯನ್ನು ಮಂಜೂರು ಮಾಡಬಾರದಾಗಿತ್ತು ಎಂಬ ವಾದವು ಕಾನೂನುರೀತ್ಯಾ ಸಮರ್ಥನೀಯವಾಗಿಲ್ಲ ಮತ್ತು ವಾಸ್ತವವಾಗಿ ಸರಿಯಾದುದಲ್ಲ, ಕಾನೂನುರೀತ್ಯಾ ಇದು ಸಮರ್ಥನೀಯವಲ್ಲವೆಂಬುದಕ್ಕೆ ಕಾರಣವೆಂದರೆ, ಇದನ್ನು ನಿಯತ ಎರಡನೇ ಅಪೀಲಿನಲ್ಲಿ ವಿಚಾರಣಾ ನ್ಯಾಯಾಲಯದ ಡಿಗ್ರಿಗಳನ್ನು ಅಸಿಂಧುಗೊಳಿಸುವುದಕ್ಕೆ ಕಾರಣವೆಂದು ವಾದಿಸಬಹುದಾಗಿತ್ತಾದರೂ, ಅರ್ಜಿದಾರರು ಹಾಗೆ ಮಾಡಿರುವುದಿಲ್ಲ; ನಾಲ್ಕು ತಿ ೦ ಗಳುಗಳ ಅವಧಿ ಮುಕ್ತಾಯವಾಗುವ ಮೊದಲೆ ದಾವೆಯನ್ನು ಹೂಡಿದ್ದರಿಂದ ಇದು ವಾಸ್ತವವಾಗಿ ಸರಿಯಾದುದಲ್ಲ ಹಾಗೂ ವ್ಯಾಜ್ಯವು ಇತ್ಯರ್ಥದಲ್ಲಿದ್ದುದ್ದರಿಂದ, ವ್ಯಾಜ್ಯಕಾರನಿಗೆ ಬಾಧಕವಾಗುವುದಿಲ್ಲ ವಾದ್ದರಿಂದ ದಾವೆಯನ್ನು ಹೂಡಿದ ದಿನಾಂಕದಂದು ಇದ್ದಂತೆ ಪಕ್ಷಕಾರರ ಹಕ್ಕುಗಳನ್ನು ತೀರ್ಮಾನಿಸಬೇಕಾದ ಅಗತ್ಯವಿರುವುದಿಲ್ಲ; ಇದಲ್ಲದೆ, 2 ನೇ ಪ್ರತಿವಾದಿಗೆ ಬದಲಾಗಿ 1 ನೇ ಪ್ರತಿವಾದಿಯ ಹೆಸರಿಗೆ ಮಾರಾಟಪತ್ರ ಬರೆದುಕೊಡುವುದಕ್ಕೆ ಅರ್ಜಿದಾರರಿಗೆ ಯಾವುದೇ ತಡೆಯಿರಲಿಲ್ಲ; ಹಾಗಾಗಿ, ಅರ್ಜಿದಾರರ ವಾದವನ್ನು ವಾದವನ್ನು ಅ ೦ ಗೀಕರಿಸುವುದು, ಪ್ರತಿವಾದಿಸುತ್ತಿರುವ ಪ್ರತಿವಾದಿಗಳ ಭಾವನೆಗೆ ಅವರು ಎಸಗಿದ ಮೋಸದ ಪ್ರಯೋಜನ ಪಡೆಯಲು ಅವರಿಗೆ ಮಂಜೂರಾತಿ ನೀಡಿದಂತಾಗುತ್ತಿತ್ತು.

(vi) ದೊಡ್ಡ ಮೊತ್ತದ ಹಣವನ್ನು ಸ್ವೀಕರಿಸಿದಿನಾಂಕ: 10.06.2005 ರಂದು ಪ್ರತಿವಾದಿಸುತ್ತಿರುವ ಪ್ರತಿವಾದಿಯೊಂದಿಗೆ ಅರ್ಜಿದಾರರು ಒಪ್ಪಂದ ಮಾಡಿಕೊಂಡಿದ್ದರು; ದಾವೆಯ ವಸ್ತುವಿಷಯವಾದ ಸ್ವತ್ತನ್ನು ಪರಭಾರೆ ಮಾಡಲು ಅಧಿಕಾರ ವ್ಯಾಪ್ತಿಯುಳ್ಳ ಪ್ರಾಧಿಕಾರಿಯಿಂದ ಅವರು ಅನುಮತಿ ಪಡೆದುಕೊಂಡಿದ್ದರು ಮತ್ತು ಈ ಹಂತದಲ್ಲಿ ಅವರು 1 ನೇ ಪ್ರತಿವಾದಿಯನ್ನು ಗಣನೆಗೆ ತೆಗೆದುಕೊಂಡಿದ್ದಾರೆ; ತರುವಾಯದಲ್ಲಿ, ಕಾನೂನುರೀತ್ಯಾ ನೀಡಿದ ನೋಟೀಸನ್ನು ಉಪೇಕ್ಷಿಸಿ 2 ನೇ ಪ್ರತಿವಾದಿಗೆ ಉದ್ದೇಶಿತ ಸ್ವತ್ತನ್ನು ಅರ್ಜಿದಾರರು ಮಾರಾಟ ಮಾಡಿದ್ದಾರೆ; ಅರ್ಜಿದಾರರ ಕಡೆಯಿಂದ ಎಸಗಿದ ಈ ಕೃತ್ಯವು, ಜಮೀನು ಮಂಜೂರು ಮಾಡಿದ ಸರ್ಕಾರಕ್ಕೆ ಮಾಡಿದ ಮೋಸವಾಗಿದೆ, ಪ್ರತಿವಾದಿಸುತ್ತಿರುವ ಪ್ರತಿವಾದಿಯ ಹೆಸರಿನಲ್ಲಿ ಅದನ್ನು ಪರಭಾರೆ ಮಾಡಲು ಅನುಮತಿ ನೀಡಿದ ಪ್ರಾಧಿಕಾರಕ್ಕೆ ಮಾಡಿದ ಮೋಸವಾಗಿದೆ ಹಾಗೂ ಪ್ರತಿವಾದಿಸುತ್ತಿರುವ ಪ್ರತಿವಾದಿಗೆ ಮಾಡಿದ ಮೋಸವಾಗಿದೆ; ಬಹುಶಃ, 2 ನೇ ಪ್ರತಿವಾದಿಯ ವಿರುದ್ಧ ಮಾಡಿದ ಮೋಸವೂ ಆಗುತ್ತದೆ; ಹಾಗೂ

(vii) ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978 ನ್ನು, ದಮನಿತ ವರ್ಗಗಳ ಪ್ರಯೋಜನಕ್ಕಾಗಿ, ಮಂಜೂರಾತಿ ಪಡೆದವರ ಅನಕ್ಷರತೆ ಮತ್ತು ಹಿಂದುಳಿದಿರುವಿಕೆಯ ಕಾರಣದಿಂದ ಪ್ರಾಮಾಣಿಕವಾಗಿ ಕಳೆದುಕೊ ೦ ಡ ಜಮೀನುಗಳು ಅವರಿಗೆ ಪುನಃ ಕೆ ಸೇರುವ ೦ ತಾಗಲು ಅಧಿನಿಯಮತಗೊಳಿಸಲಾಗಿದೆ; ಅರ್ಜಿದಾರರು, ಭಾರತ ಸಂವಿಧಾನದ 227 ನೇ ಅನುಚ್ಛೇದದ ಅಡಿಯಲ್ಲಿ ವಿಶೇಷ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಈ ನ್ಯಾಯಾಲಯದಲ್ಲಿ ಪರಿಹಾರ ಮಂಜೂರಾತಿಗೆ ಅರ್ಹರಾಗುವ ಮನಸಾಕ್ಷಿಯುಳ್ಳ ವ್ಯಾಜ್ಯಕಾರರೇನೂ ಆಗಿರುವುದಿಲ್ಲ; ದಾವೆಯಲ್ಲಿ, ಅಪೀಲಿನಲ್ಲಿ, ಜಾರಿಯಲ್ಲಿ ಮತ್ತು ಈ ನ್ಯಾಯಾಲಯದ ಮುಂದೆ ಅರ್ಜಿದಾರರ ನಡತೆಯು ಹೆಚ್ಚಿನ ವೆಚ್ಚ ವಿಧಿಸುವಿಕೆಯನ್ನು ಖಾತರಿಪಡಿಸುತ್ತದೆ.

ಮೇಲಿನ ಸಂದರ್ಭಗಳ ಹಿನ್ನಲೆಯಲ್ಲಿ, ಈ ರಿಟ್ ಅರ್ಜಿಯನ್ನು, ಎಂಟು ವಾರಗಳ ಅವಧಿಯೊಳಗೆ 1 ನೇ ಪ್ರತಿವಾದಿಗಳಿಗೆ ಅರ್ಜಿದಾರರು ಸಂದಾಯ ಮಾಡಬೇಕಾದ 25,000/-ರೂಪಾಯಿಗಳ ಪರಿಮಾಣಿತ ವೆಚ್ಚ ಸಹಿತವಾಗಿ ವಜಾಗೊಳಿಸಲಾಗಿದೆ; ವೆಚ್ಚವನ್ನು ಸಂದಾಯ ಮಾಡದಿದ್ದರೆ, ನ್ಯಾಯಾಲಯದ ನಿಂದನೆಯನ್ನು ಅನ್ವಯಿಸಿ, 1 ನೇ ಪ್ರತಿವಾದಿ ಅದನ್ನು ವಸೂಲು ಮಾಡಿಕೊಳ್ಳಲು ಸಹ ಮುಕ್ತರಾಗಿದ್ದಾರೆ.